ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,

ಕುಂದಾಪುರ

ಸಿ.ಸಿ. ನಂಬ್ರ: 1751/2022

ಚಾಸಾ: 1 ಪ್ರಾಸಾ:1

ದಿನಾಂಕ: 20.02.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ನಿರಂಜನ ಗೌಡ ಬಿ ಎಸ್ |
| ತಂದೆಯ ಹೆಸರು | : | ಶಂಕರೇ ಗೌಡ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಪಿ ಎಸ್ ಐ |
| ವಾಸ ಸ್ಥಳ | : | ಎನ್ ಆರ್ ಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 16-07-2021 ರಿಂದ 19-08-2022ರವರೆಗೆ ಕುಂದಾಪುರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 04-04-2022 ರಂದು ಠಾಣಾ ಸಿಬ್ಬಂದಿಗಳಾದ ಚಾಸಾ-2 ರಿಂದ 5 ರವರೊಂದಿಗೆ ರಂಮ್ಜಾನ್ ಹಬ್ಬದ ವಿಶೇಷ ಗಸ್ತುವಿಗಾಗಿ ಕಂಡ್ಲೂರು ಗ್ರಾಮದ ದೂಪದಕಟ್ಟೆ ಬಳಿ ಬೆಳಗ್ಗೆ 7-50 ರ ಸಮಯದಲ್ಲಿ ವಾಹನಗಳ ತಪಾಸಣೆ ನಡೆಸುತ್ತಿದ್ದಾಗ ಒಬ್ಬ ವ್ಯಕ್ತಿಯು ನಮ್ಮನ್ನು ನೋಡಿ ದೂರದಲ್ಲಿ ತನ್ನ ದ್ವಿ ಚಕ್ರ ವಾಹನವನ್ನು ನಿಲ್ಲಿಸಿ ಪರಾರಿಯಾಗಿರುತ್ತಾನೆ. ಆತನ ಹೆಸರು ಖಾಜಿ ಅಫಾನ್ ಆಗಿರುತ್ತದೆ.

ನಂತರ ವಾಹನದ ಬಳಿ ಹೋಗಿ ಪರಿಶೀಲಿಸಿದಾಗ ಅದರ ಸಂಖ್ಯೆ ಕೆಎ-20-ಇಎಂ-2551 ಹೋಂಡಾ ಎಲಿವೇಟರ್ ಆಗಿದ್ದು ಅದರ ಮುಂಭಾಗದಲ್ಲಿ ಕಾಲು ಇಡುವ ಜಾಗದಲ್ಲಿ ಒಂದು ಬಿಳಿ ಪ್ಲಾಸ್ಟಿಕ್ ಚೀಲ ಇದ್ದು, ಸದ್ರಿ ಚೀಲವನ್ನು ಪರಿಶೀಲಿಸಿದಾಗ ದನದ ತ್ಯಾಜ್ಯ ಇರುವುದು ಕಂಡು ಬಂದಿರುತ್ತದೆ. ಈ ಸಂಬಂಧ ಸ್ಥಳೀಯರಾದ ಚಾಸಾ-6 ಮತ್ತು 7 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಪರಿಶೀಲಿಸಿದಾಗ ಸದ್ರಿ ಚೀಲದಲ್ಲಿ ಒಂದು ಬಾಲ ಸಹಿತ ಇರುವ ಕೆಂಪು ಬಣ್ಣದ ಒಂದು ದನದ ಚರ್ಮ, ತಲೆಯ ಎಲುಬು, ದನದ ಕಾಲಿನ ಗೊರಸು-4, ದನದ ಹೊಟ್ಟೆಯ ತ್ಯಾಜ್ಯ, ದನದ ಕೊಂಬು ಮತ್ತು ಕಿವಿ ಇರುವುದು ಕಂಡು ಬಂದಿರುತ್ತದೆ.

ಸದ್ರಿ ಆಸಾಮಿ ಎಲ್ಲಿಯೋ ದನವನ್ನು ಕಳುವು ಮಾಡಿ ಅದನ್ನು ಹತ್ಯೆ ಮಾಡಿ ಮಾಂಸವನ್ನಾಗಿ ಮಾಡಿರುವ ಬಗ್ಗೆ ಅನುಮವಾನ ಬಂದಿದ್ದು, ಈ ಸಂಬಂಧ ಪಂಚರ ಸಮಕ್ಷಮ ಸದ್ರಿ ವಾಹನ ಮತ್ತು ದನದ ತ್ಯಾಜ್ಯವನ್ನು ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಮಹಜರು ಜರುಗಿಸಿ ವಶಕ್ಕೆ ಪಡೆದು ನಂತರ ಠಾಣೆಗೆ ಬಂದು ವರದಿ ನೀಡಿರುತ್ತೇನೆ. ಸದ್ರಿ ಪಂಚನಾಮೆಗೆ ನನ್ನ ಮತ್ತು ಚಾಸಾ-2 ರಿಂದ 7 ರವರು ಸಹಿ ಮಾಡಿರುತ್ತೇವೆ.

ಅದೇ ದಿನ ವರದಿಯೊಂದಿಗೆ ವ್ಯಕ್ತಿ ಮತ್ತು ಮಾಲನ್ನು ಚಾಸಾ-13 ರವರ ಮುಂದೆ ಹಾಜರುಪಡಿಸಿರುತ್ತೇನೆ. ಪ್ರ.ವ.ವರದಿ ದಾಖಲಾದ ನಂತರ ಕಡತವನ್ನು ಹಿಂದಕ್ಕೆ ಪಡೆದು ಮಹಜರು ಸಮಯದಲ್ಲಿ ವಶಕ್ಕೆ ಪಡೆದ ವಸ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-2 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-11 ರವರಿಗೆ ವಶಕ್ಕೆ ಪಡೆದ ಸ್ವತ್ತುಗಳನ್ನು ಪರಿಶೀಲಿಸಿ ವರದಿಯನ್ನು ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ.

ದಿಃ 05-04-2022 ರಂದು ಆರ್ ಟಿ ಓ ಕಚೇರಿಗೆ ಸದ್ರಿ ವಾಹನದ ಬಿ ಎಕ್ಸಟ್ರಾಕ್ಟ್ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ.

ದಿಃ 06-04-2022 ರಂದು ಚಾಸಾ-11 ರವರಿಂದ ಬಂದ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

ದಿಃ 11-04-2022 ರಂದು ದಂಡಾಧಿಕಾರಿಗಳ ಕಾರ್ಯಾಲಯ ಕುಂದಾಪುರ ಉಪ ವಿಭಾಗ ಇವರ ಅನುಮತಿ ಪಡೆದು ದನದ ತ್ಯಾಜ್ಯವನ್ನು ನಾಶಪಡಿಸಿರುತ್ತೇನೆ.

ದಿಃ 21-04-2022 ರಂದು ಆರ್ ಟಿ ಓ ರವರಿಂದ ವರದಿ ಬಂದಿದ್ದು,ಸದ್ರಿ ವಾಹನದ ಮಾಲೀಕರಾದ ಚಾಸಾ-10 ರವರಿಗೆ ಕಲಂ 133ರಡಿಯಲ್ಲಿ ನೋಟೀಸು ನೀಡಿ ಅವರಿಂದ ಉತ್ತರ ಪಡೆದುಕೊಂಡಿರುತ್ತೇನೆ.

ದಿಃ 09-05-2022 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ಆತನಿಗೆ ಕಲಂ 41ಎ ರಡಿಯಲ್ಲಿ ತಿಳುವಳಿಕೆ ಜಾರಿ ಮಾಡಿರುತ್ತೇನೆ. ಆತನ ಸ್ವಇಚ್ಛಾ ಹೇಳಿಕೆ ಪಡೆದು ಆತ ವಧೆ ಮಾಡಿದ್ದ ಜಾಗವನ್ನು ತೋರಿಸಿಕೊಟ್ಟಂತೆ ಸ್ಥಳ ಪಂಚನಾಮೆಯನ್ನು ಚಾಸಾ-8 ಮತ್ತು 9 ರವರ ಸಮಕ್ಷಮ ಬೆಳಗ್ಗೆ 11 ರಿಂದ 12ರವರೆಗೆ ಜರುಗಿಸಿರುತ್ತೇನೆ. ಸದ್ರಿ ಸ್ಥಳದಲ್ಲಿ ವಧೆ ಮಾಡಲು ಬಳಸಿದ್ದ ಕಬ್ಬಿಣದ ಕತ್ತಿ, ಪ್ಲಾಸ್ಟಿಕ್ ಹಿಡಿ ಇರುವ ಕಬ್ಬಿಣದ ಚಾಕು, ಮರದ ತುಂಡುಗಳನ್ನು ವಶಕ್ಕೆ ಪಡೆದು ಅದನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-12 ರವರಿಂದ ಕಲಂ 65ಬಿರಡಿಯಲ್ಲಿ ಪಂಚನಾಮೆ ವೇಳೆಗೆ ತೆಗೆದ ಪೋಟೋಗಳ ಸಂಬಂಧ ದೃಡೀಕರಣ ಪತ್ರ ಪಡೆದು ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿ ದೂರು, ದಿಃ 04-04-2022ರ ಸ್ಥಳ ಪಂಚನಾಮೆ, ದಿಃ 09-05-2022ರ ಸ್ಥಳ ಮತ್ತು ಸ್ವತ್ತು ಸ್ವಾಧೀನತಾ ಪಂಚನಾಮೆ, ಕಲಂ 133ರ ನೋಟೀಸು, ಉತ್ತರ, ಪಶು ವೈದ್ಯಾಧಿಕಾರಿಯವರ ಪತ್ರ, 5 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 ರಿಂದ 11 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮರದ ದಿಮ್ಮಿ, ಚೂರಿ ಮತ್ತು ಕತ್ತಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದಃ</u>**

ಈ ಪ್ರಕರಣದಲ್ಲಿ ನಾನೇ ಪಿರ್ಯಾದುದಾರ ಮತ್ತು ತನಿಖಾಧಿಕಾರಿ ಎಂದರೆ ಸರಿ. ಆ ಸಮಯದಲ್ಲಿ ಕುಂದಾಪುರ ಗ್ರಾಮಾಂತರ ಠಾಣೆಯಲ್ಲಿ ಮತ್ತೊಬ್ಬರು ಪಿ ಎಸ್ ಐ ಇದ್ದರಾ ಎಂದು ನೆನಪಿಲ್ಲ. ನನ್ನ ಪ್ರಕಾರ ಇದು ಘೋರ ಅಪರಾಧವಲ್ಲ. ಹಸು ಕಳ್ಳತನವಾದ ಬಗ್ಗೆ ಯಾವುದೇ ದೂರು ಬಂದಿಲ್ಲ. ನನ್ನ ತನಿಖೆ ಪ್ರಕಾರ 1 ಹಸುವನ್ನು ವಧೆ ಮಾಡಿರುತ್ತಾರೆ. ದಿಃ 04-04-2022 ರಂದು ನಾನು ಬೆಳಗ್ಗೆ 6 ಗಂಟೆಗೆ ರಂಜಾನ್ ಹಬ್ಬದ ಪ್ರಯುಕ್ತ ಗಸ್ತಿಗೆ ಹೋಗಿರುವುದು ದಿನವಹಿಯಲ್ಲಿ ಕಂಡು ಬರುತ್ತದೆ. ಅನಂತರ 9-10ಕ್ಕೆ ಠಾಣೆಗೆ ಮರಳಿ ಬಂದಿರುತ್ತೇನೆ. ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಚರಿಯಲ್ಲಿ ಕಂಡು ಬರುತ್ತದೆ.

ಸದ್ರಿ ದಿನ ಠಾಣಾ ಪ್ರಭಾರವನ್ನು ಚಾಸಾ-13 ರವರಿಗೆ ನೀಡಿರುತ್ತೇನೆ. ಘಟನಾ ಸ್ಥಳವು ನಮ್ಮ ಠಾಣೆಯಿಂದ 1 ಕಿ.ಮೀ ದೂರವಿದೆ ಎಂದರೆ ಸರಿ. ಬೇರೆ ಎಲ್ಲಿ ಗಸ್ತು

ತಿರುಗಿದ್ದೆ ಎಂದು ಈಗ ನೆನಪಿಲ್ಲ. ದೂಪದ ಕಟ್ಟೆಗೆ 7-50ಕ್ಕೆ ಬಂದಿರುತ್ತೇವೆ. ದೂಪದ ಕಟ್ಟೆ ಜಂಕ್ಷನ್ ಎಂದರೆ ಸರಿ. ಅದರ ಅಕ್ಕಪಕ್ಕದಲ್ಲಿ ಅಂಗಡಿ, ಬಸ್ಸು ನಿಲ್ದಾಣ ಮತ್ತು ರಿಕ್ಷಾ ನಿಲ್ದಾಣ ಇದೆ ಎಂದರೆ ಸರಿ. ರಸ್ತೆಯ ಉತ್ತರ ದಿಕ್ಕಿನಲ್ಲಿ ಮನೆಗಳು ಇವೆ ಎಂದರೆ ಸರಿ. ಸದ್ರಿ ರಸ್ತೆ ಸಾಕಷ್ಟು ವಾಹನಗಳ ಸಂಚಾರವಿರುತ್ತದೆ ಎಂದರೆ ಸರಿ. ಸಾಕ್ಷಿ ಬೆಳಗ್ಗಿನ ಅವಧಿಯಾದ ಕಾರಣ ವಾಹನ ಧಟ್ಟಣೆ ಕಡಿಮೆ ಇತ್ತು ಎಂದು ನುಡಿಯುತ್ತಾರೆ.

ನಮ್ಮ ವಾಹನವನ್ನು ಠಾಣೆಗೆ ಮುಖ ಮಾಡಿ ನಿಲ್ಲಿಸಿರುತ್ತೇವೆ. ದ್ವಿ ಚಕ್ರ ವಾಹನ ಉತ್ತರ ದಿಕ್ಕಿನಲ್ಲಿರುವ ರಸ್ತೆಯಿಂದ ಬಂದಿರುತ್ತದೆ. ನಮ್ಮ ಜೀಪನ್ನು ಕುಂದಾಪುರದ ಕಡೆಗೆ ನಿಲ್ಲಿಸಿದ್ದೇವು. ಆತ ಬಂದ ದಾರಿಯಲ್ಲಿಯೇ ವಾಪಸ್ಸು ಓಡಿ ಹೋಗಿರುತ್ತಾನೆ. ಆತ ಸುಮಾರು 50 ಮೀಟರ್ ದೂರ ಓಡಿ ಹೋಗಿರುತ್ತಾನೆ. ಸದ್ರಿ ದಿನ ಆರೋಪಿ ದನದ ತ್ಯಾಜ್ಯವನ್ನು ತೆಗೆದುಕೊಂಡು ಹೋಗುತ್ತಿದ್ದ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲ. ಆರೋಪಿಯ ಪರಿಚಯ ಆತ ಕಂಡ್ಲೂರು ಠಾಣೆಯ ವ್ಯಾಪ್ತಿಯಲ್ಲಿ ವಾಸವಿರುವ ಕಾರಣ ಪರಿಚಯ ಇತ್ತು. ಕೆಲವರು ಪರಿಚಯಸ್ಥರು ಇದ್ದು ಆರೋಪಿಯ ಪರಿಚಯವಿದೆ. ಆತ ಆಗಾಗ ಠಾಣೆಯ ಬಳಿ ಬರುತ್ತಿದ್ದ. ಆತ ಹೆಲ್ಮೇಟ್ ಧರಿಸಿಲ್ಲ. ಬೈಕನ್ನು ಮಣ್ಣು ರಸ್ತೆಯಲ್ಲಿ ಬಿಟ್ಟು ಹೋಗಿರುತ್ತಾರೆ. ನಾವು 4 ಜನ ಸಿಬ್ಬಂದಿ ಇದ್ದೇವು. ನಾವು ಆತನನ್ನು ಹಿಡಿಯಲು ಪ್ರಯತ್ನಿಸಿದಾಗ ಆತ ಓಡಿ ಹೋಗಿರುತ್ತಾನೆ.

ಆತನನ್ನು ನಾನು ಮತ್ತು ಸಿಬ್ಬಂದಿ ಎಲ್ಲರೂ ಗುರುತಿಸಿರುತ್ತೇವೆ. ಸ್ಥಳ ಕ್ಕೆ ಹೋಗಿ ವಾಹನವನ್ನು 10 ನಿಮಿಷದಲ್ಲಿ ಪರಿಶೀಲಿಸಿರುತ್ತೇವೆ. ಸದ್ರಿ ದಿನ ಬೇರೆ ಎಷ್ಟು ವಾಹನಗಳನ್ನು ತಪಾಸಣೆ ಮಾಡಿದ್ದೇವೆ ಎಂದು ನೆನಪಿಲ್ಲ. ಪ್ರಕರಣ ದಾಖಲಾದ ಬಗ್ಗೆ ನೆನಪಿಲ್ಲ.

ಚಾಸಾ-6 ಮತ್ತು 7 ರವರು ರಸ್ತೆಯಲ್ಲಿ ಸಿಕ್ಕಿರುತ್ತಾರೆ. ಅವರು ಎಲ್ಲಿಂದ ಬರುತ್ತಿದ್ದರು ಎಂದು ನೆನಪಿಲ್ಲ. ಅವರನ್ನು ನಾನೇ ಕರೆದಿರುತ್ತೇನೆ. ಅವರು ನಮ್ಮ ಪರಿಚಿತರು ಅಲ್ಲ. ಬೇರೆ ಯಾರಿಗೂ ಪರಿಚಯವಿರಲಿಲ್ಲ. ಅಕ್ಕಪಕ್ಕದವರು ಯಾರೂ ಇಲ್ಲದ ಕಾರಣ ಸ್ಥಳಿಯರು ಸಿಕ್ಕಿಲ್ಲ. ಸದ್ರಿ ದಿನ ಬಸ್ಸು ನಿಲ್ದಾಣದಲ್ಲಿ ಸಾಕಷ್ಟು ಜನ ಇರುತ್ತಾರೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಯಾರೂ ಇರಲಿಲ್ಲ ಎಂದು ನುಡಿಯುತ್ತಾರೆ.

ಸದ್ರಿ ದಿನ ಯಾವುದೇ ವಾಹನ ಸಿಕ್ಕಿಲ್ಲದೆ ಅದರಲ್ಲಿ ಯಾವುದೇ ದನದ ತ್ಯಾಜ್ಯ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿ ಯಾವುದೇ ವಾಹನದಲ್ಲಿ ಬಂದು ನಮ್ಮನ್ನು ನೋಡಿ ಓಡಿ ಹೋಗಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ತಯಾರಿಸಿ ಚಾಸಾ-6 ಮತ್ತು 7ರವರ ಸಹಿಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ಈ ಪ್ರಕರಣದ ಪತ್ತೆ ಹಚ್ಚಿದ 1 ತಿಂಗಳ ನಂತರ ಆರೋಪಿ ಠಾಣೆಗೆ ಹಾಜರಾಗಿರುತ್ತಾರೆ. ಆತನ ನೀಡಿದ್ದಾನೆ ಎಂಬ ಕಬೂಲಾತಿ ಹೇಳಿಕೆಯ ಆಧಾರದ ಮೇಲೆ ಸ್ಥಳಕ್ಕೆ ಹೋದಾಗ ಚಾಸಾ-8 ಮತ್ತು 9 ರವರು ಇದ್ದರು. ಅವರನ್ನು 10-50ಕ್ಕೆ ನೋಟೀಸು ನೀಡಿ ಕರೆಯಿಸಿರುತ್ತೇವೆ. ಅದರ ಪ್ರತಿಯನ್ನು ಹಾಜರುಪಡಿಸಿಲ್ಲ. ಅವರನ್ನು ನಮ್ಮ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತೇವೆ. ಅದು ಜನ ಓಡಾಡುವ ಪ್ರದೇಶವಾಗಿರುತ್ತದೆ. ಆತ ಹೊಳೆಯ ಪಕ್ಕದ ಹಾಡಿಯಲ್ಲಿ ಕೃತ್ಯ ಎಸಗಿರುತ್ತಾನೆ. ಅದು ಜನನಿಭಿಡ ಪ್ರದೇಶ. ಅಲ್ಲಿಂದ ಹೊಳೆ 100 ಮೀಟರ್ ದೂರದಲ್ಲಿದೆ.

ಪಂಚನಾಮೆ ಪ್ರಕಾರ ಉತ್ತರ ದಿಕ್ಕಿಗೆ ವಾರಾಹಿ ನದಿ ಇದೆ. ಸದ್ರಿ ಸ್ಥಳದಲ್ಲಿ ದನವನ್ನು ವಧೆ ಮಾಡಿರುವುದಾಗಿ ಆರೋಪಿ ಹೇಳಿರುತ್ತಾನೆ. ಸದ್ರಿ ಸ್ಥಳದಲ್ಲಿ ಯಾವುದೇ

ಕುರುಹು ಇರಲಿಲ್ಲ. ಮುಮಾ1 ರಿಂದ 3 ರಲ್ಲಿ ಯಾವುದೇ ರಕ್ತದ ಕುರುಹುಗಳು, ಮಾಂಸದ ತುಂಡುಗಳು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಅವುಗಳನ್ನು 1 ತಿಂಗಳಾದ ನಂತರ ವಶಕ್ಕೆ ಪಡೆದಿರುವುದು ಕಾರಣವಾಗಿರುತ್ತದೆ ಎಂದು ನುಡಿಯುತ್ತಾರೆ. ಮುಮಾ1 ರಿಂದ 3 ಎಲ್ಲಾ ಕಡೆಗಳಲ್ಲಿ ಸಿಗುತ್ತವೆ ಎಂದರೆ ಸರಿ,

ಪ್ರಕರಣಕ್ಕಾಗಿ ಸದ್ರಿ ಮಾಲುಗಳನ್ನು ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ದಿಃ 09-05-2022 ರಂದು ಅಂತಹ ಯಾವುದೇ ಮಾಲುಗಳನ್ನು ಆರೋಪಿ ನೀಡಿದ್ದಾನೆ ಎಂದು ಹೇಳುವ ಕಬೂಲಾತಿ ಹೇಳಿಕೆ ಆಧಾರದ ಮೇಲೆ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸ್ಥಳ ದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಳ ದಲ್ಲಿ ಯಾವುದೇ ದಾಖಲೆಗಳನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ದಾಖಲೆಗಳನ್ನು ಠಾಣೆಯಲ್ಲಿ ತಯಾರಿಸಿದ್ದು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಚಾಸಾ-2 ರಿಂದ 5 ರವರ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ 04-04-2022 ರಂದು ಚಾಸಾ-6 ಮತ್ತು 7 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮುಂದೆ ಯಾವುದೇ ಕಬೂಲಾತಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ವಾಹನ ಮಾಲೀಕರು ಚಾಸಾ-10ರವರು ಆಗಿರುತ್ತಾರೆ. ನ್ಯಾಯಾಲಯದ ಮುಂದೆ ಆರೋಪಿಯಾಗಿರುವುದಿಲ್ಲ. ಸಾಕ್ಷಿ ಚಾಸಾ-10 ರವರು ತಮ್ಮ ಉತ್ತರದಲ್ಲಿ ಆರೋಪಿ ವಾಹನವನ್ನು ಬಳಸುತ್ತಿದ್ದ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾಹನದ ಬಿಡುಗಡೆಗಾಗಿ ಚಾಸಾ-10 ರವರು ನಮ್ಮ ಠಾಣೆಗೆ ಬಂದಾಗ ಆತನ ಸಹಿಗಳನ್ನು ಪಡೆದು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪಶು ಆಸ್ಪತ್ರೆಯವರಿಗೆ ಕೋರಿಕೆ

ಪತ್ರವನ್ನು ಸಲ್ಲಿಸಿ ಅವರಿಂದ ಯಾವುದೇ ಒಪ್ಪಿಗೆ ಪತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಈ ಪ್ರಕರಣಕ್ಕೆ ಅನುಗುಣವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಆರೋಪಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮುಮಾ1 ರಿಂದ 3 ಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನೇ ಪಿರ್ಯಾದುದಾರರನಾದ ಕಾರಣ ಅದಕ್ಕೆ ಅನುಗುಣವಾಗಿ ದಾಖಲಾತಿಗಳು ಹಾಗೂ ಹೇಳಿಕೆಗಳನ್ನು ಸೃಷ್ಟಿಸಿ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ರಿಂದ 11ನ್ನು ಘಟನಾ ಸ್ಥಳದಲ್ಲಿ ತೆಗೆದಿಲ್ಲದೆ ಅದಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**